## - 4 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಅದು ಹೇಗೆ ಸಾಧ್ಯ?

ಯೇಸುವು ಅರಸನಂತೆ ಮತ್ತು ರಕ್ಷಕನಂತೆ ತಂದೆಯ ಬಲಗಡೆಯಲ್ಲಿ ಮಹಿಮೆ ಹೊಂದಲು ಭೂಲೋಕವನ್ನು ಬಿಡುವ ಮೊದಲು, ಆತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ" (ಲೂಕ 24:49ಬಿ). ತನ್ನ ಮರಣಕ್ಕಿಂತ ಮೊದಲೇ, ಯೇಸುವು ಅವರಿಗೆ ಅವರನ್ನು ಎಲ್ಲಾ ಸತ್ಯಗಳಲ್ಲಿ ನಡಿಸುವ ಪರಿಶುದ್ಧಾತ್ಮನನ್ನು ವಾಗ್ದಾನ ಮಾಡಿದ್ದನು. "ಯೋಹಾನನಂತೂ ನೀರಿನಲ್ಲಿ ಬಾಪ್ತಿಸ್ಮ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸದೊಳಗಾಗಿ ಪರಿಶುದ್ಧಾತ್ಮದಲ್ಲಿ ಸ್ನಾನವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟುಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆ ಕೊಟ್ಟನು" (ಅಪೊಸ್ತಲರ ಕೃತ್ಯಗಳು 1:4, 5).

ಈ ಅಪ್ಪಣೆ ಕೊಟ್ಟನಂತರ ಯೇಸುವು ಅವರಿಂದ ತೇಗೆದುಕೊಳ್ಳಲ್ಪಟ್ಟನು, "ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು" (ಅಪೊಸ್ತಲರ ಕೃತ್ಯಗಳು 1:9ಬಿ). "ಆಗ ಅವರು ಯೆರೂಸಲೇಮಿಗೆ ಹಿಂದಿರುಗಿ ಬಂದರು" (ಅಪೊಸ್ತಲರ ಕೃತ್ಯಗಳು 1:12ಎ). ಅಪೊಸ್ತಲರ ಕೃತ್ಯಗಳು 2ರಲ್ಲಿ ನಾವು ಇದನ್ನು ಓದುತ್ತೇವೆ,

> ... ಅವರೆಲ್ಲರೂ ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪರಿಶುದ್ಧಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು (ವಚನಗಳು 1-4; ಅಪೊಸ್ತಲರ ಕೃತ್ಯಗಳು 1:9-12 ಸಹ ಓದಿರಿ).

ಇದು ಮೇಲಿನಿಂದ ಬಲದೊಂದಿಗೆ ಅಪೊಸ್ತಲರನ್ನು ಹೊದಿಸುವೆನೆಂದು ರಕ್ಷಕನು ವಾಗ್ದಾನ ಮಾಡಿದ್ದನ್ನು ನೆರವೇರುವಿಕೆಯ ದಾಖಲೆಯಾಗಿದೆ. ಆ ಸತ್ಯವು ಯಾವುದೇಬುದ್ಧಿವಂತ ಬೈಬಲ್ ವಿದ್ಯಾರ್ಥಿಯಿಂದ ಅಲ್ಲಗಳೆಯಲ್ಪಡುವದಿಲ್ಲ. ಈ ಶಿಷ್ಯರು ಪರಿಶುದ್ಧಾತ್ಮನಿಂದ ತುಂಬಲ್ಪಡುವವರೆಗೆ ಮತ್ತು ಅವರಿಗೆ ನುಡಿಯುವ ಶಕ್ತಿಯನ್ನು ಕೊಡುವವರೆಗೆ ಲೋಕವನ್ನು ರಕ್ಷಿಸಲಿಕ್ಕೆ ಹೋಗುವದಕ್ಕೆ ನಮ್ಮ ಕರ್ತನು ಇಷ್ಟವುಳ್ಳವನಾಗಿರಲಿಲ್ಲ. ಹೀಗೆ ಅವರು ಬಲದಿಂದ ಹೊದಿಸಲ್ಪಟ್ಟ ತರುವಾಯ ಅವರು ಮಾಡಿದ ಕಾರ್ಯವು ಪರಿಶುದ್ಧಾತ್ಮನ ಕಾರ್ಯವಾಗಿತ್ತೆಂದು ನಾವು

ನ್ಯಾಯವಾಗಿ ತೀರ್ಮಾನಿಸಬಹುದು. ಆತನು ಯಾವುದನ್ನು ಮಾಡಲಿಕ್ಕೆ ಬಂದನೋ ಅದನ್ನೇ ಮಾಡಿದನು ಎಂಬುದರ ಬಗ್ಗೆ ಯಾರೂ ಸಂಶಯ ಪಡಬಾರದು, ಅದು ಅವರನ್ನು ಎಲ್ಲಾ ಸತ್ಯದಲ್ಲಿ ನಡಿಸುವುದಾಗಿತ್ತು. ನಿಶ್ಚಯವಾಗಿಯೂ ಬೋಧಕರಂತೆ ಅವರ ಕಾರ್ಯವು ಅಂದಿನಿಂದ ಪರಿಶುದ್ಧಾತ್ಮನ ಕಾರ್ಯವಾಗಿತ್ತು. ಅವರನ್ನು ಹಿಂಬಾಲಿಸುವುದು ನಿಜವಾಗಿಯೂ ಪರಿಶುದ್ಧಾತ್ಮನನ್ನು ಹಿಂಬಾಲಿಸುವುದಾಗಿತ್ತು.

ಮೇಲಣ ಲೋಕದಿಂದ ಬಲ ತುಂಬಿಸಲ್ಪಟ್ಟ ಈ ಅಪೊಸ್ತಲರಿಂದ ಮಾಡಲ್ಪಟ್ಟ ಕಾರ್ಯಕ್ಕೆ ವ್ಯತಿರಿಕ್ತವಾಗಿ ಒಬ್ಬನು ಹೋದರೆ, ಅವನು ತನ್ನ ಧಾರ್ಮಿಕ ಜೀವನದಲ್ಲಿ ಪರಿಶುದ್ಧಾತ್ಮನ ಮಾರ್ಗದರ್ಶನವಿದೆಯೆಂದು ಹೇಳಿಕೊಳ್ಳಲಾರನು. ಒಬ್ಬ ಧಾರ್ಮಿಕ ಮನುಷ್ಯನು ಅವನು ಧಾರ್ಮಿಕ ಜೀವನ ಮತ್ತು ಆಚರಣೆಯು ಆತ್ಮನ ಬಲದೊಂದಿಗೆ ಹೊದಿಸಲ್ಪಟ್ಟವರ ಜೀವನ ಮತ್ತು ಆಚರಣೆಯೊಂದಿಗೆ ಸಾಮರಸ್ಯದಲ್ಲಿದ್ದರೆ ಪರಿಶುದ್ಧಾತ್ಮನಿಂದ ನಡಿಸಲ್ಪಡುವನು ಎಂದು ಬೇರೆ ಮಾತಿನಲ್ಲಿ ಹೇಳಬಹುದು. ದೈವಿಕ ಆತ್ಮನಿಂದ ನಡಿಸಲ್ಪಡುವವರನ್ನು ನಂಬಿಗಸ್ತಿಕೆಯಿಂದ ಅನುಸರಿಸುವವನು ಸಭಾಪಂಗಡತ್ವದಿಂದ ಸ್ವತಂತ್ರನಾಗಿರುವನು; ಅವನು ಯಾವುದೇ ಸಭಾಪಂಗಡಕ್ಕೆ ಸೇರಿರುವದಿಲ್ಲ, ಆದರೆ ಒಬ್ಬ ಕ್ರೈಸ್ತನಾಗಿರುವನು, ಕರ್ತನ ಶಿಷ್ಯನಾಗಿರುವನು. ಈ ಬೋಧಕರನ್ನು ನಡಿಸಿದ ಮಾರ್ಗದರ್ಶಿಯನ್ನು ಹೀಗೆ ಅನುಸರಿಸುವವರು ಅವರು ಒಳಗೊಂಡಿದ್ದ ಸಭೆಗೆ, ದೇವರ ಸಭೆಗೆ ಒಳಪಟ್ಟಿರುವರು. ಇಂದು ದೇವರ ಸಭೆಯ ಸದಸ್ಯರು ಈ ಬಲದಿಂದ ನಡಿಸಲ್ಪಟ್ಟ ಜನರಂತೆಯೇ ಸದಸ್ಯರಾದರು. ಅಂದರೆ, ಅವರು “ಸಭೆಗೆ ಸೇರಿಕೊಳ್ಳಲಿಲ್ಲ,” ಆದರೆ “ಅವರು ರಕ್ಷಿಸಲ್ಪಡುತ್ತಾ [ಇದ್ದಂತೆ]” ದೇವರು ಅವರನ್ನು ತನ್ನ ರಕ್ಷಿಸಲ್ಪಟ್ಟವರೊಂದಿಗೆ ಕೂಡಿಸಿದನು. ಹೀಗೆ ರಕ್ಷಿಸಲ್ಪಟ್ಟವರು ಆತನ ಸಭೆಯಾದರು. ನಿಶ್ಚಯವಾಗಿಯೂ, ಪರಿಶುದ್ಧಾತ್ಮನನ್ನು ನಂಬಿಗಸ್ತಿಕೆಯಿಂದ ಅನುಸರಿಸುವವರು ರಕ್ಷಿಸಲ್ಪಡುವರು ಇಲ್ಲವೇ ಯೆರೂಸಲೇಮಿನಲ್ಲಿ ಆತ್ಮನನ್ನು ಅನುಸರಿಸಿದವರಿಗೆ ದೇವರು ದಯೆಯುಳ್ಳವನಾಗಿದ್ದಂತೆ ದಯೆಯುಳ್ಳವನಾಗಿರುವನು ಎಂಬುದರ ಬಗ್ಗೆ ಯಾರೂ ಪ್ರಶ್ನಿಸುವದಿಲ್ಲ. ಈ ತತ್ವಗಳನ್ನು ಸತ್ಯವೆಂದು ಸ್ವೀಕರಿಸಿದರೆ, ಆಗ ಅಂಥ ಪ್ರತಿಯೊಬ್ಬನೂ ಕರ್ತನಿಂದ ರಕ್ಷಿಸಲ್ಪಡುವನು ಮತ್ತು ಆತನ ಸಭೆಗೆ ಸೇರಿ ಸಲ್ಪಡುವನು ಎಂಬುದನ್ನು ಅರ್ಥಮಾಡಿಕೊಳ್ಳುವೆವು.

ಈ ಬೋಧನೆಯನ್ನು ತಪ್ಪಾಗಿ ತಿಳಿದುಕೊಳ್ಳದಿರುವದಕ್ಕೆ ವಾಚಕನ ನಿಷ್ಪಕ್ಷಪಾತವನ್ನೂ ಹೃದಯದ ಒಳ್ಳೇ ತನವನ್ನೂ ನಂಬತಕ್ಕದ್ದು. ರಕ್ಷಣೆಗೆ ಒಬ್ಬನು ಪರಿಶುದ್ಧಾತ್ಮನಿಂದ ನಡಿಸಲ್ಪಡಬಹುದು ಮತ್ತು ದೇವರ ಸಭೆಗೆ ಕೂಡಿಸಲ್ಪಡಬಹುದು ಆದರೆ ಆಮೇಲೆ ಒಂದು ಸಭಾಪಂಗಡವನ್ನು “ಸೇರುವದರಿಂದ” ಇಲ್ಲವೇ ಅದರೊಂದಿಗೆ ಹೊಂದಿಕೊಳ್ಳುವದರಿಂದ ಸಭಾಪಂಗಡತ್ವದೊಳಗೆ ಹೋಗಬಹುದು. ಹಾಗೆ ಮಾಡುವವನು ಸಭಾಪಂಗಡತ್ವದ ಕ್ರೈಸ್ತನಾಗುವನು, ಎರಡು ಸಭೆಗಳಿಗೆ ಒಳಗಾದವನಾಗಿರುವನು; ಯಾಕಂದರೆ ಅವನು ರಕ್ಷಿಸಲ್ಪಟ್ಟಾಗ ನಮ್ಮ ಕರ್ತನ ಸಭೆಗೆ ಕೂಡಿಸಲ್ಪಟ್ಟನು ಆದರೆ ಅನಂತರ ಸಭೆ ಎಂದು *ಕರೆಯಲ್ಪಡುವ* ಮಾನವ ನಿರ್ಮಿತ - ಸಂಸ್ಥೆಗೆ ಸೇರಿಕೊಂಡನು. ಇದೇ ಸಂಗತಿಯು ಕೆಲವು ಸಲ ಶ್ರೇಷ್ಠ ಹೃದಯಗಳಿಂದ ಮಾಡಲ್ಪಟ್ಟಿದೆ. ಹೀಗಿದ್ದರೂ, ಸಭಾಪಂಗಡಿಗನಾಗಲು, ಬೇಕಾಗುವ ಪ್ರತಿಯೊಂದು ಹೆಜ್ಜೆಯು ಪರಿಶುದ್ಧಾತ್ಮನ ಬೋಧನೆಯನ್ನು ದಾಟಿಹೋಗುವುದು ಮತ್ತು ಆತನ ಯಥಾರ್ಥವಾದ ಚಿನ್ಹಗಳಿಗೆ ವ್ಯತಿರಿಕ್ತವಾದದ್ದಾಗಿರುವುದು.

ಸಭಾಪಂಗಡತ್ವವು ಹೊಸ ಒಡಂಬಡಿಕೆಯ ಚರಿತ್ರೆಯಲ್ಲಿ ಪ್ರತಿಯೊಬ್ಬ ಕ್ರೈಸ್ತನ ಮತ್ತು ಪ್ರತಿಯೊಂದು ಸಭೆಯ ಉದಾಹರಣೆಗೆ ವ್ಯತಿರಿಕ್ತವಾದದ್ದಾಗಿರುವುದು. ಹೊಸ

ಒಡಂಬಡಿಕೆಯ ಎಲ್ಲಾ ಸಮಯದಲ್ಲಿ ಪ್ರೇರೇಪಿತ ಅಪೊಸ್ತಲರಿಂದ ಅಥವಾ ಪ್ರವಾದಿಗಳಿಂದ ಸಭಾಪಂಗಡವನ್ನು ಸೇರಲು ಯಾವುದೇ ಕ್ರೈಸ್ತನು ನಡಿಸಲ್ಪಡಲಿಲ್ಲ. ಒಬ್ಬ ಕ್ರೈಸ್ತನಿಗಿಂತ ಹೆಚ್ಚಾಗುವವನು - ಕರ್ತನ ಶಿಷ್ಯನಿಗಿಂತ ಮತ್ತು ಆತನ ಪರಿಶುದ್ಧ ಸಭೆಯ ಸದಸ್ಯನಿಗಿಂತ - ಹೆಚ್ಚಾಗುವವನು - ದೇವರ ಸ್ವಂತ ಆತ್ಮನಿಂದ ನಡಿಸಲ್ಪಟ್ಟ ಪರಿಶುದ್ಧ ಜನರ ನಿರ್ದೇಶನಗಳಿಗಾಗಿ ಮತ್ತು ಉದಾಹರಣೆಗಳಿಗೆ ವಿರುದ್ಧವಾಗಿ ಹೋಗಲು ತನ್ನ ಮೇಲೆ ಜವಾಬ್ದಾರಿ ತೆಗೆದುಕೊಳ್ಳುವನು.

ದೇವರ ಬೇಡಿಕೆಗಳ ವಿರುದ್ಧವಾಗಿರುವಂಥವುಗಳೊಂದಿಗೆ ಅಂಥ ಜವಬ್ದಾರಿಕೆಯನ್ನು ಸ್ವೀಕರಿಸಲು ಒಬ್ಬನು ಮನಸ್ಸುಳ್ಳವನಾಗಿದ್ದರೆ, ಅದು ಅವನ ಕೆಲಸವಾಗಿದೆ; ಆದರೆ ಅವನ ಬಾಗಿಲ ಬಳಿಯಲ್ಲಿ ಜವಾಬ್ದಾರಿಕೆಯನ್ನು ಇಡುವುದು ನನ್ನ ಕಾರ್ಯವಾಗಿದೆ. ನಾನು ಅದನ್ನು ಅಲ್ಲಿ ಬಿಡುತ್ತೇನೆ. ಹೊಸ ಒಡಂಬಡಿಕೆಯ ಸಮಯದಲ್ಲಿದ್ದಂತೆ ಈಗ ಜನರಿಗೆ ಕೇವಲ ಕ್ರೈಸ್ತರಾಗಿರುವುದು ಅಷ್ಟೇ ಸುಲಭವಾಗಿದೆ; ಜನರು ಹಾಗೆ ಇಲ್ಲದಿರಲು ಒಂದೇ ಕಾರಣವು ಹಾಗಿರುವದಕ್ಕೆ ಅವರಿಗೆ ಮನಸ್ಸಿಲ್ಲದೇ ಇರುವುದು ಇಲ್ಲವೇ ಕ್ರಿಸ್ತನ ಬಗ್ಗೆ ಸತ್ಯಗಳ ಜ್ಞಾನದ ಕೊರತೆ ಅವರಿಗಿರುವುದು.

ಶಿಷ್ಯರ ಮೇಲೆ ಪರಿಶುದ್ಧಾತ್ಮನು ಬಂದನಂತರ ಕೂಡಲೇ, ಒಂದು ದೊಡ್ಡ ಸಭೆ ಒಂದಾಗಿ ಕೂಡಿಬಂದಿತು. ಪೇತ್ರನು - ಇಲ್ಲವೇ, ಪರಿಶುದ್ಧಾತ್ಮನು ಪೇತ್ರನನ್ನು ಒಂದು ಸಾಧನದಂತೆ - ಉಪಯೋಗಿಸಿ - ಅವಕಾಶವನ್ನು ಹಿಡಿದುಕೊಂಡು ಪ್ರಸಂಗಿಸಲಿಕ್ಕೆ ಪ್ರಾರಂಭಿಸಿದನು. ಅವರ ಮೇಲೆ ಬಲವು ಬರುವವರೆಗೆ ಯೆರೂಸಲೇಮಿಗೆ ಹೋಗಿ ಅಲ್ಲಿ "ಕಾದುಕೊಂಡಿರಬೇಕೆಂದು" ಯೇಸುವು ತನ್ನ ಶಿಷ್ಯರಿಗೆ ಹೇಳಿದ್ದನು. ಅನಂತರ ಅವರು ಪ್ರತಿಯೊಂದು ಜೀವಿಗೆ ಸುವಾರ್ತೆಯನ್ನು ಸಾರಬೇಕಾಗಿತ್ತು. ಅವರು ಹೋಗಿದ್ದರು, ಅವರು ಕಾದುಕೊಂಡಿದ್ದರು, ಮತ್ತು ಪರಿಶುದ್ಧಾತ್ಮನು ಬಂದಿದ್ದನು ಹಾಗೂ ಅವರಲ್ಲಿ ಪ್ರವೇಶಿಸಿದ್ದನು; ಹೀಗೆ ಅವರು ಪ್ರಸಂಗಿಸಲು ಸಿದ್ಧರಾಗಿದ್ದರು.

ಪೇತ್ರನು ಸಭಾಪಂಗಡವಲ್ಲದ ಕ್ರೈಸ್ತನು ಇಲ್ಲವೇ ಶಿಷ್ಯನು ಆಗಿದ್ದನು. ಒಬ್ಬ ಸಭಾಪಂಗಡವಲ್ಲದ್ದರ ಬೋಧಕ ಮತ್ತು ಪ್ರಸಂಗಿಯಂತೆ, ಅವನು ಯಾವುದೇ ಸಭಾಪಂಗಡವನ್ನು ಪ್ರತಿನಿಧೀಕರಿಸಲಿಲ್ಲ. ಅವನು ಕೇವಲ ರಕ್ಷಿಸಲ್ಪಟ್ಟವರನ್ನು ಕರ್ತನು ಸೇರಿಸುವ ಸಭೆಯ ಸದಸ್ಯನಾಗಿದ್ದನು. ನಿಶ್ಚಯವಾಗಿಯೂ ಅವನ ಕಾರ್ಯವು ಸಭಾಪಂಗಡವಲ್ಲದ್ದರ ಕಾರ್ಯವಾಗಿದ್ದು ಯಾವುದೇ ಸಭಾಪಂಗಡವನ್ನು ಕಟ್ಟಲಿಲ್ಲ. ಅವನ ಶ್ರೋತೃ ಸಮೂಹವು ದೂರದಿಂದಲೂ ಸಮೀಪದಿಂದಲೂ ಕರ್ತನ ಸ್ವಂತ ತಂದೆಯಾದ ದೇವರನ್ನು ಆರಾಧಿಸಲು ಬಂದ ಯೆಹೂದ್ಯರನ್ನು ಒಳಗೊಂಡಿತ್ತು. ಇವರು ಭಕ್ತಿವಂತ - ಯೆಹೂದ್ಯರು, ಬಹಳ ಧಾರ್ಮಿಕರೂ ಮತ್ತು ಜೀವನದಲ್ಲಿ ಪ್ರತಿಷ್ಠಿಸಿಕೊಂಡವರೂ ಆಗಿದ್ದು, ಯೇಸುವಿನಲ್ಲಿ ದೇವರ ಕುಮಾರನಂತೆ ನಂಬಿಕೆಯಿಡಲಿಲ್ಲ. ಅವರ ಹೃದಯಗಳಲ್ಲಿಯ ಈ ಅಪನಂಬಿಕೆಯಿಂದ ಅವರು ಕೂಡಿಬಂದಿದ್ದರು; ಹೀಗಿರುವದರಿಂದ ಪೇತ್ರನ ಪ್ರಸಂಗದ ಭಾರವು ಅವರಿಗೆ ಯೇಸುವೂ ಕ್ರಿಸ್ತನೂ, ದೇವರ ಕುಮಾರನೂ ಆಗಿರುವನು ಎಂಬುದನ್ನು ಅವರಿಗೆ ಪ್ರತ್ಯಕ್ಷ ಪಡಿಸುವುದಾಗಿತ್ತು. ಈ ಪಂಚಾಶತ್ತಮದ ದಿನಕ್ಕಿಂತ ಐವತ್ತು ದಿನಗಳ ಮೊದಲು, ಇದೇ ಯೆಹೂದ್ಯರು, ತಾವು ಒಬ್ಬ ಮೋಸಗಾರನನ್ನು ಕೊಲ್ಲುತ್ತಿದ್ದೇವೆ ಎಂದು ನಂಬಿ, ದೇವರ ಕುಮಾರನ ರಕ್ತದಿಂದಲೇ ತಮ್ಮ ಬೆರಳುಗಳನ್ನು ಕಲೆಯಾಗಿಸಿಕೊಂಡಿದ್ದರು. ಪೇತ್ರನಿಗೆ ಉತ್ತಮವಾದ ಶ್ರೋತೃ ಸಮೂಹವಿತ್ತು - ಲೋಕ ಭಾವನೆಯ ಜನರಲ್ಲ, ನಾಸ್ತಿಕರಲ್ಲ, ಆದರೆ ಇಬ್ರಿಯ ಮಕ್ಕಳಂತಿದ್ದ ಜನರು, ಮತ್ತು ದಾನಿಯೇಲನಂತೆ, ದೇವರ ಸೇವೆಗಾಗಿ ಸಾಯಲು ಸಿದ್ಧರಾದವರು ಆಗಿದ್ದರು. ಇವರು ಪ್ರಾರ್ಥನಾ ಭರಿತರೂ,

ಆಸಕ್ತಿಯುಳ್ಳವರೂ ಹಾಗೂ ಭಕ್ತಿವಂತ ಜನರಾಗಿದ್ದರು - ಈ ಸಂದರ್ಭಕ್ಕೆ ಉತ್ತಮವಾದ ಶ್ರೋತೃ ಸಮೂಹವಾಗಿದ್ದರು.

ಮೊದಲು, ಪೇತ್ರನು ಆ ಪ್ರಾತಃಕ್ಕಾಲದಲ್ಲಿ ಯೆರೂಸಲೇಮಿನಲ್ಲಿಯ ಬಲದ ಅದ್ಭುತಕರವಾದ ಪ್ರತ್ಯಕ್ಷತೆಗಳನ್ನು ಕುರಿತ ದುರಭಿಪ್ರಾಯಗಳನ್ನು ತಪ್ಪಾದ ದೃಷ್ಟಿಕೋನ ಗಳನ್ನೂ ಅವರಿಂದ ತೆಗೆದುಹಾಕಿದನು. ಇದನ್ನು ಅವರ ಬೈಬಲಿನಿಂದ, ಹಳೇ ಒಡಂಬಡಿಕೆಯಿಂದ ಉಲ್ಲೇಖಿಸುವದರಿಂದ ಮಾಡಿದನು. ಆಗ ಅವನು ತನ್ನ ನಿಜವಾದ ಪ್ರಸಂಗವನ್ನು ಪ್ರಾರಂಭಿಸಿದನು:

> ಇಸ್ರಾಯೇಲ್ ಜನರೇ, ನನ್ನ ಮಾತುಗಳನ್ನು ಲಾಲಿಸಿರಿ - ನಜರೇತಿನ ಯೇಸು ಇದ್ದನಲ್ಲಾ, ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕ ಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೊಟ್ಟನು. ಆ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್ ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ. ಆತನನ್ನು ದೇವರು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು (ಅಪೊಸ್ತಲರ ಕೃತ್ಯಗಳು 2:22-24ಎ).

ಈ ಚಿಕ್ಕ ಭಾಷಣದಲ್ಲಿ, ಪೇತ್ರನ ಮುಖಾಂತರ, ಪರಿಶುದ್ಧಾತ್ಮನು, ಯೇಸುವಿನ ಜೀವನದ ಬಗ್ಗೆ ಪ್ರಸಂಗಿಸಿದನು. ಆತನ ಅದ್ಭುತಗಳ, ಬಲವಾದ ಕಾರ್ಯಗಳ ಮತ್ತು ಸಂಕೇತಗಳ ಬಗ್ಗೆ, ಹಾಗೂ ತನ್ನ ಮಗುವಿನ ದೇವರ ಒಪ್ಪಿಗೆಯ ಬಗ್ಗೆ ಆತನು ಮಾತಾಡಿದನು. ಈ ಶ್ರೋತೃಗಳ ಸಮೂಹವು, ಕಾನೂನು ಭ್ರಷ್ಟ ಜನರನ್ನು ಉಪಯೋಗಿಸಿ, ದೇವರ ಕುಮಾರನನ್ನು ಶಿಲುಬೆಗೆ ಹಾಕಿ ಕೊಂದು ಹಾಕಿದರು ಮತ್ತು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು ಎಂದು ಅವನು ಘೋಷಿಸಿದನು. ಯೇಸುವು ಸತ್ತವರೊಳಗಿಂದ ಹಿಂದಿರುಗಿ ಬಂದನು ಎಂಬ ಪ್ರಸ್ತಾಪವು ರುಜುವಾತುಪಡಿಸಲ್ಪಡ ಬೇಕಾಗಿತ್ತು. ಇಸ್ರಾಯೇಲಿನ ಸುಂದರ ಸಂಗೀತಗಾರನಾದ ದಾವೀದನಿಂದ ಉಲ್ಲೇಖಿಸಿ ಪರಿಶುದ್ಧಾತ್ಮನು ರುಜುವಾತನ್ನು ಪರಿಚಯ ಪಡಿಸಿದನು; ಈ ಜನರು ಅವನನ್ನು ಒಬ್ಬ ದೈವಿಕ ಬೋಧಕನೆಂದು ಮತ್ತು ಬರಹಗಾರನೆಂದು ನಂಬಿದ್ದರು. ಉಲ್ಲೇಖದಿಂದ, ದಾವೀದನು ಯಾರೋ ಒಬ್ಬಾತನ ಪುನರುತ್ಥಾನವನ್ನು ಕುರಿತು ಮಾತಾಡುತ್ತಿದ್ದಾನೆ ಎಂಬುದು ನಿಶ್ಚಿತವಾಗಿತ್ತು: ಅವನು ಅದನ್ನು ತನ್ನ ಬಗ್ಗೆ ಹೇಳಿದ್ದಿರಬಹುದು, ಇಲ್ಲವೇ ಭಾಷೆಯನ್ನು ಅವನು ಇನ್ನೊಬ್ಬನ ಬಾಯಲ್ಲಿ ಹಾಕುತ್ತಿದ್ದಿರಬಹುದು. ದಾವೀದನು ಸತ್ತು ಹೋಗಿದ್ದಾನೆ, ಅವನು ಹೂಣಲ್ಪಟ್ಟನು ಮತ್ತು ಅವನ ಸಮಾಧಿಯು ಆ ದಿನದ ವರೆಗೆ ಅಲ್ಲಿರುವುದು ಎಂದು ಆತ್ಮನು ಜನರ ಅವಗಾಹನೆಗೆ ತಂದನು. ಆದುದರಿಂದ, ಅವನು ತನ್ನ ಬಗ್ಗೆ ಅರ್ಥಮಾಡಿ ಹೇಳದೇ ಇದ್ದುದರಿಂದ ಅವನು ಯಾರ ಬಗ್ಗೆ ಹೇಳಿದನು? ದಾವೀದನು ಒಬ್ಬ ಪ್ರವಾದಿಯಾಗಿದ್ದು, ದಾವೀದನ ವಂಶಜರಲ್ಲಿ ಒಬ್ಬನನ್ನು ಅವನ ಸಿಂಹಾಸನದ ಮೇಲೆ ಕೂಡ್ರಿಸುವದಾಗಿ ದೇವರು ವಾಗ್ದಾನ ಮಾಡಿದ್ದರಿಂದ ಅವನು ಕ್ರಿಸ್ತನ ಪುನರುತ್ಥಾನದ ಬಗ್ಗೆ ಹೇಳಿದ್ದಾನೆ ಎಂದು ಆತ್ಮನು ಹೇಳಿದನು:

> ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ. ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪರಿಶುದ್ಧಾತ್ಮ ವರವನ್ನು ತಂದೆಯಿಂದ ಹೊಂದಿ

> ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ .... ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ (ಅಪೊಸ್ತಲರ ಕೃತ್ಯಗಳು 2:32-36).

ಈ ಪ್ರಾಮಾಣಿಕವಾದ ಮತ್ತು ಭಕ್ತಿವಂತ - ಕೇಳುಗರ ಹೃದಯಗಳಲ್ಲಿ ನಂಬಿಕೆಯನ್ನು ಹುಟ್ಟಿಸಲು ಇದು ಸಾಕಾಗಿತ್ತು. ಈ ಸಮಯಕ್ಕೆ ಆಗಲೇ, ತಮ್ಮ ಕೈಗಳ ಮೇಲೆ ರಕ್ತದ ಕಲೆಗಳನ್ನು ನೋಡಿದರು ಮತ್ತು ದೇವರ ಒಬ್ಬನೇ ಕುಮಾರನನ್ನು ಕೊಲೆಮಾಡಿದ ಅಪರಾಧವನ್ನು ತಮ್ಮ ಹೃದಯಗಳಲ್ಲಿ ಭಾವಿಸಿದರು. "ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗುನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ - ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಿದರು" (ಅಪೊಸ್ತಲರ ಕೃತ್ಯಗಳು 2:37).

ಅವರಿಗೆ ಮನವರಿಕೆಯಾಯಿತೋ? ಯಾರು ಅದರ ಬಗ್ಗೆ ಸಂಶಯ ಪಡುವರು? ಐವತ್ತು ದಿನಗಳ ಮೊದಲು ಅವರು ಶಿಲುಬೆಗೆ ಹಾಕಿದ ಯೇಸುವನ್ನು, ಕ್ರಿಸ್ತನು, ದೇವರ ಕುಮಾರನು ಎಂದು ಕೂಗುತ್ತಿದ್ದವರು ನಂಬಿದರೋ? ತನ್ನ ಬಲ ವಾದ ಸೂಚಕ ಕಾರ್ಯಗಳಿಂದ ದೇವರು ಆತನನ್ನು ಒಪ್ಪಿಕೊಂಡನೆಂಬುದರ ಬಗ್ಗೆ ಅವರು ಸಂಶಯಪಟ್ಟರೋ? ಈಗ ಅವರು ಮಾಡಬೇಕೆಂದು ಪರಿಶುದ್ಧಾತ್ಮನು ಹೇಳಿ ದ್ದನ್ನು ಮಾಡಿದರೋ? ದೇವರು ಆತನನ್ನು ಕರ್ತನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂದು ಅವರು ನಿಶ್ಚಿತವಾಗಿ ತಿಳಿದುಕೊಂಡರೋ? ಸುವಾರ್ತೆಯ ಈ ಮಹಾ ಸಂಗತಿಯನ್ನು ಅವರು ನಿಜವಾಗಿಯೂ ತಿಳಿದುಕೊಂಡಿದ್ದರೆ, ಮತ್ತು ಅದನ್ನು ತಿಳಿಯಲು ಪೇತ್ರನಲ್ಲಿ ಆತ್ಮನು ಹೇಳಿದಂತೆ ಅವರು ತಿಳಿದುಕೊಂಡಿದ್ದರೆ - ಅಂದರೆ, "ನಿಶ್ಚಿತವಾಗಿ," ಪೂರ್ಣಭರವಸೆಯೊಂದಿಗೆ, ಸಂಶಯವಿಲ್ಲದೆ - ತಿಳಿದಿದ್ದರೆ ನಂಬಿಕೆ ಇರಲು ಏನು ಕೊರತೆಯಾಗಿರುವುದು? ಒಬ್ಬನು ಸಂಶಯವಿಲ್ಲದೆ, ಪೂರ್ಣಭರವಸೆಯೊಂದಿಗೆ, ಯೇಸುವು ದೇವರ ಸ್ವಂತ ಮಗುವಾಗಿದ್ದನು; ಆತನ ಬಲವಾದ ಕಾರ್ಯಗಳು ಆತನ ಬಗ್ಗೆ ದೇವರ ಒಪ್ಪಿಗೆಯಾಗಿರುವುದು; ಆತನು ಕ್ರೂಜಿಸಲ್ಪಟ್ಟನು, ಸತ್ತವರೊ ಳಗಿಂದ ಎಬ್ಬಿಸಲ್ಪಟ್ಟನು ಮತ್ತು "ಕರ್ತನೂ ಕ್ರಿಸ್ತನೂ" ಆಗಿ ದೇವರ ಬಲಗಡೆಯಲ್ಲಿ ಮಹಿಮೆಗೇರಿಸಲ್ಪಟ್ಟನು ಎಂದು ತಿಳಿಯಬೇಕಾಗುತ್ತದೆ. ಇದೆಲ್ಲವನ್ನೂ ಒಬ್ಬನು ನಿಶ್ಚಿತ ವಾಗಿ, ಪೂರ್ಣ ಭರವಸೆಯಿಂದ ತಿಳಿದುಕೊಂಡನಂತರ, ನಂಬುವದಕ್ಕಾಗಿ ಅವನು ಮುಂದೇನು ಮಾಡಬೇಕು? "ನಾನೇನು ಮಾಡಬೇಕು?" ಎಂದು ಕೂಗುವವರೆಗೆ ಅವನ ಹೃದಯವು ತಿವಿಯಲ್ಪಡುವಂತೆ, ಈ ಮಹಾ ಸಂಗತಿಗಳನ್ನು ಭರವಸೆಯಿಂದ ಸ್ವೀಕರಿಸಿಕೊಳ್ಳುವವನಿಗೆ ನಂಬಬೇಕೆಂದು ಹೇಳುವ ಅಗತ್ಯತೆಯಿರುವುದೋ? ಹೆಚ್ಚಾದ ಯಾವುದನ್ನು ಅವನು ನಂಬತಕ್ಕದ್ದು, ಮತ್ತು ಅದನ್ನು ಅವನು ಹೇಗೆ ನಂಬಬೇಕು?

ಈ ನಂಬುತ್ತಿರುವ ಜನರಿಗೆ - ಯೇಸುವಿನ ಬಗ್ಗೆ ಈ ಮಹಾ ಸತ್ಯಗಳನ್ನು ನಿಶ್ಚಿತವಾಗಿ ತಿಳಿದುಕೊಂಡಿರುವ ಈ ಜನರಿಗೆ, ಈ ಮನವರಿಕೆಗೊಂಡ ಜನರಿಗೆ, ಪರಿಶುದ್ಧಾತ್ಮನು ಹೀಗೆ ಹೇಳಿದನು,

> ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ

ಮಾಡೋಣವಾಗಿದೆ (ಅಪೊಸ್ತಲರ ಕೃತ್ಯಗಳು 2:38, 39).

ಮುಂದೆ, ದೈವಿಕ ದಾಖಲೆಯು ನಮಗೆ ಹೀಗೆ ಹೇಳುತ್ತದೆ, "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು ... ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" (ಅಪೊಸ್ತಲರ ಕೃತ್ಯಗಳು 2:41-47ಬಿ).

ಸಭಾಪಂಗಡದಿಂದ ಸ್ವತಂತ್ರವಾಗಿದ್ದ, ಒಂದು "ಸಭಾ ಕೂಟವನ್ನು" ಪುನರಾವಲೋಕನ ಮಾಡುತ್ತಿರುವೆವೆಂಬುದನ್ನು ಜ್ಞಾಪಿಸಿಕೊಳ್ಳೋಣ. ಲೋಕವನ್ನು ರಕ್ಷಿಸುತ್ತ, ಕಾರ್ಯಾಚರಣೆಯಲ್ಲಿದ್ದ ಸಭೆಯನ್ನು ನಾವು ನೋಡುತ್ತಲಿದ್ದೇವೆ. ನಮ್ಮ ಕರ್ತನಿಂದ ಕಳುಹಿಸಲ್ಪಟ್ಟ ಪರಿಶುದ್ಧಾತ್ಮನಿಂದ ಬೋಧನೆಯು ಬಂದಿತು, ಮತ್ತು ಆತನು ಯಾವ ಮನುಷ್ಯನ ಮುಖಾಂತರ ಮಾತಾಡುತ್ತಿದ್ದನೋ ಆ ಮನುಷ್ಯನು ಸಭಾಪಂಗಡವಲ್ಲದ ಸಭೆಯ ಸದಸ್ಯನಾಗಿದ್ದನು, ಕೇವಲ ಒಬ್ಬ ಕ್ರೈಸ್ತನಾಗಿದ್ದನು. ಈ ಬೋಧನೆಯ ಎಲ್ಲವೂ ಸಭಾಪಂಗಡವಲ್ಲದ್ದರ ಬೋಧನೆಯಾಗಿತ್ತು. ಶುದ್ಧವಾದದ್ದೂ ಸರಳವಾದದ್ದೂ ಆಗಿತ್ತು. ಈ ಸಭಾಪಂಗಡವಲ್ಲದ ಸಭಾಕೂಟದಲ್ಲಿ ಈ ಸಭಾಪಂಗಡದವನಾಗಿರದ ಬೋಧಕನು ಅವಿಶ್ವಾಸಿಗಳಿಗೆ "ನಿಶ್ಚಿತವಾಗಿ ತಿಳಿಯಲು," ಸಂಶಯವಿಲ್ಲದೇ ತಿಳಿಯಲು, ಯೇಸುವು "ಕರ್ತನೂ ಕ್ರಿಸ್ತನೂ" ಎರಡೂ ಆಗಿದ್ದನೆಂದು ತಿಳಿಯಲು ಕರೆದನು. ತಿಳಿದವರೆಲ್ಲರೂ ಮತ್ತು ತಮ್ಮ ಹೃದಯಗಳಲ್ಲಿ ತಪ್ಪಿತಸ್ಥರೆಂದು ನಿರ್ಣಯಿಸಲ್ಪಟ್ಟವರೆಲ್ಲರೂ "ಮಾನಸಾಂತರ ಪಡಿರಿ" ಎಂದು ಆಜ್ಞಾಪಿಸಲ್ಪಟ್ಟರು. ಹೀಗೆ ಈ ಸಭಾಪಂಗಡವಲ್ಲದ ಕೂಟದಲ್ಲಿ, ರಕ್ಷಿಸಲ್ಪಡದೇ ಇದ್ದ ಜನರು ಸುವಾರ್ತೆಯ ಮಹಾ ಸಂಗತಿಗಳನ್ನು ಸಂಶಯವಿಲ್ಲದೆ ಸ್ವೀಕರಿಸಬೇಕು ಆ ಮೇಲೆ ಮಾನಸಾಂತರ ಪಡಬೇಕು, ಮತ್ತು ಕೊನೆಗೆ "ಪಾಪಗಳ ಪರಿಹಾರಕ್ಕಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ" ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ಆಜ್ಞಾಪಿಸಲ್ಪಟ್ಟರು.

ಖಂಡಿಸಲ್ಪಡದ ತರ್ಕದಿಂದ, ಪೇತ್ರನು ಮಾಡಿದಂತೆ ಯೇಸುವನ್ನು ಇಂದು ಪ್ರಸಂಗಿಸುವವನು ಸಭಾಪಂಗಡವಲ್ಲದ ಬೋಧನೆಯನ್ನು ಬೋಧಿಸುತ್ತಿರುವನೆಂದು ಹೇಳಲ್ಪಡುತ್ತದೆ. ಹಾಗೆ ಮಾಡಲು, ಅವನು ಯೇಸುವನ್ನು ಮನ್ನಣೆ ಹೊಂದಿದ ದೇವರ ಕುಮಾರನಂತೆ, ಉತ್ಥಾನ ಹೊಂದಿದ, ಸಿಂಹಾಸನಾರೂಢನಾದ ಕರ್ತ ಮತ್ತು ಕ್ರಿಸ್ತನಂತೆ ಪ್ರಸಂಗಿಸತಕ್ಕದ್ದು. ರಕ್ಷಿಸಲ್ಪಡದಿರುವವರನ್ನು ನಂಬಲಿಕ್ಕೆ ಇಲ್ಲವೇ "ನಿಶ್ಚಿತ ವಾಗಿ" ತಿಳಿದುಕೊಳ್ಳಲಿಕ್ಕೆ ಕರೆಯತಕ್ಕದ್ದು. ಅ ಮೇಲೆ ಈ ಸತ್ಯಗಳನ್ನು ತಿಳಿದ ಎಲ್ಲರಿಗೆ ಮಾನಸಾಂತರ ಪಡಲು ಮತ್ತು ತಮ್ಮ ಪಾಪಗಳ ಪರಿಹಾರಕ್ಕಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮಹೊಂದಲು ಪ್ರಬೋಧಿಸತಕ್ಕದ್ದು.

ಅದರಂತೆ, ಯೇಸುವು ಕರ್ತನೂ ಕ್ರಿಸ್ತನೂ ಆಗಿರುವನೆಂದು "ನಿಶ್ಚಿತವಾಗಿ" ತಿಳಿಯುವದರಿಂದ ಹೃದಯದಲ್ಲಿ ಅಲಗುನೆಟ್ಟಂತಾದ ಪ್ರತಿಯೊಬ್ಬನು, ಮಾನಸಾಂತರ ಪಡುವವನು, ಮತ್ತು ತನ್ನ ಪಾಪಗಳ ಕ್ಷಮಾಪಣೆಗಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದಿದವನು ರಕ್ಷಿಸಲ್ಪಟ್ಟಿದ್ದಾನೆ. ಹೀಗೆ ಅವನು ಕರ್ತನ ಶಿಷ್ಯನಾಗುವನು, ಕೇವಲ ಒಬ್ಬ ಕ್ರೈಸ್ತನಾಗುವನು, ಮತ್ತು ನಮ್ಮ ಕರ್ತನ ಸಭೆಗೆ ಸೇರಿಸಲ್ಪಡುವನು. ನಮ್ಮ - ಕಲಿಯುವಿಕೆಗಾಗಿ ದಾಖಲೆಯಾದ ಆತ್ಮನ ಕಾರ್ಯವನ್ನು ಇಂದು ಪುನರಾವರ್ತಿಸುವ ಸಭೆಯ ಕಾರ್ಯವು ದೇವರಿಂದ ಮನ್ನಣೆ ಹೊಂದಿದಂತೆ ಮತ್ತು ಈ ಸಭಾಪಂಗಡವಲ್ಲದ ಕೂಟದಲ್ಲಿ ಆತ್ಮನಿಂದ ನಡಿಸಲ್ಪಟ್ಟಂತೆ ಇರುತ್ತದೆ. ಇದು ಹಾಗೆ ಇಲ್ಲದಿದ್ದರೆ, ಬೈಬಲು ನಮಗೆ ಬೆಲೆಯಿಲ್ಲದ್ದಾಗುವುದು.



© 2009 Truth for Today